# ಸರ್ಜಾಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ

ಸರ್ಜಾಪುರ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125

ಕ್ರಮ ಸಂಖ್ಯೆ:ಸ.ಗ್ರಾ.ಪಂ.ರ.81/2024–25 ದಿನಾಂಕ :28/10/2024

## ನಿರಾಕ್ಷೇಪಣಾ ಪತ್ರ

--*--

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಸರ್ಜಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಸರ್ಜಾಪುರ ಗ್ರಾಮದ ಸರ್ವೆ ನಂಬರ್ 485/1ರಲ್ಲಿ 2ಎಕರೆ 11ಗುಂಟೆ ಮತ್ತು ಸರ್ವೆ ನಂಬರ್ 485/2ರಲ್ಲಿ 2ಎಕರೆ 16ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಪರಿಷ್ಕೃತ ಭೂಪರಿವರ್ತನೆ ಅಧಿಕೃತ ಜ್ಞಾಪನ ಆದೇಶ ಸಂಖ್ಯೆ:ಎಎಲ್ಎನ್(ಎ)(ಎಸ್)ಸಿಆರ್/09/22–23, ದಿನಾಂಕ:15/11/2022ರಂತೆ ಶ್ರೀ ಎಸ್.ಆಕರ್ಷ್ ಬಿನ್ ಹೆಚ್.ಆರ್.ಎಸ್.ರೆಡ್ಡಿ ರವರ ಹೆಸರಿಗೆ ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ, ಸದರಿ ಜಮೀನಿನಲ್ಲಿ ಶ್ರೀ ಎಸ್.ಆಕರ್ಷ್‌ರವರು ವಸತಿ ಬಡಾವಣೆ ನಿರ್ಮಿಸಲು ಉದ್ದೇಶಿಸಿದ್ದು ಸದರಿಯವರು ಉದ್ದೇಶಿಸಿರುವ ವಸತಿ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ,

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಬಡಾವಣೆ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯಿತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯಕವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಢೀಕರಿಸುತ್ತೇವೆ, ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದ್ದು ಹಾಗೂ ಸದರಿ ಜಮೀನು ಸರ್ಜಾಪುರ–ಬೆಂಗಳೂರು ಮುಖ್ಯರಸ್ತೆ ರಸ್ತೆಗೆ ಹೊಂದಿಕೊಂಡಿದ್ದು ರಸ್ತೆ ಸಂಪರ್ಕವು ಸಹಾ ಇರುತ್ತದೆ,

ಈ ವಸತಿ ಬಡಾವಣೆಗೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂಧಪಟ್ಟವರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಸರ್ಜಾಪುರ ಗ್ರಾಮ ಪಂಚಾಯಿತಿ,
ಆನೇಕಲ್ ತಾಲ್ಲೂಕು, ಬೆಂ. ನ. ಜಿಲ್ಲೆ